ದಿನಾಂಕ 01-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಯು.ಎಸ್.ಕೆ., ವಕೀಲರಿಂದಃ

6. ನಿಪಿ.2 ಮತ್ತು 3 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಅಳಿಯ ಸಂತಾನ ಕುಟುಂಬದ ಪರವಾಗಿ ಆದೇಶವಾಗಿದೆ ಎಂದು ತಿಳಿಸಲು ಹಾಜರುಪಡಿಸಿರುತ್ತೇನೆ. ನಿಪಿ.5 ರಂತೆ ವಿಭಾಗ ಪತ್ರ ಆಗಿರುವ ವಿಷಯ 2017 ರಲ್ಲಿ ಪಹಣಿ ಪತ್ರಿಕೆ ತೆಗೆಯುವಾಗ ಗೊತ್ತಾಗಿರುತ್ತದೆ. ನನ್ನ ತಂದೆಗೆ ಸದರಿ ವಿಷಯ ಗೊತ್ತಿರಲಿಲ್ಲ. ನಿಪಿ.5 ರ ಪ್ರಕಾರ ಶೇಷಿ ಪೂಜಾರ್ತಿಗೆ ಉಳಿದವರಿಗಿಂತ ಹೆಚ್ಚಿನ ಹಿಸ್ಸೆಯನ್ನು ನೀಡಲಾಗಿದೆ ಎಂದರೆ ಸಾಕ್ಷಿ, ಅದು ಶೇಷಿ ಪೂಜಾರ್ತಿಯ ಸ್ವಂತ ಆಸ್ತಿ ಅಲ್ಲ ಎನ್ನುತ್ತಾರೆ. ಅದು ಅಳಿಯ ಸಂತಾನ ಕುಟುಂಬದ ಪರವಾಗಿ ಬಂದಿರುವ ಆಸ್ತಿಯಾಗಿರುತ್ತದೆ. ದಾವಾ ಆಸ್ತಿ ಅಳಿಯ ಸಂತಾನ ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನಿಪಿ.5 ರ ಪ್ರಕಾರ ಶೇಷಿ ಪೂಜಾರ್ತಿ ತನ್ನ ಪಾಲಿನ ಆಸ್ತಿಯನ್ನು ಪ್ರತ್ಯೇಕವಾಗಿ ಅನುಭವಿಸುತ್ತಿದ್ದರು ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡುತ್ತಿಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಉಡುಪಿ.